ಹಿಂದೀ ಮೂಲ: ರಕ್ಷಂದಾ ರೂಹಿ
ಕನ್ನಡಕ್ಕೆ: ಎಚ್.ಎಂ. ಕುಮಾರಸ್ವಾಮಿ

# ಎಚ್ಚರದ ಕಣ್ಣುಗಳೊಳಗಿನ ಒಂದು ಕನಸು

ಬಾಗಿಲಿನ ಚಿಲಕದ ಸದ್ದಿನೊಂದಿಗೆ ನನ್ನ ಉಸಿರಿನ ವೇಗ ಜಾಸ್ತಿಯಾಯಿತು. ಅವರು ಭಾರವಾದ ಹೆಜ್ಜೆಗಳೊಂದಿಗೆ ಹಾಸಿಗೆಯ ಹತ್ತಿರ ಬಂದು ನಿಂತು ಗಂಭೀರವಾದ ಸ್ವರದಲ್ಲಿ ಹೇಳಿದರು... "ಒಂದು ವೇಳೆ ನಿಮಗೆ ಬೇರೆ ಯಾರಾದರೂ ಇಷ್ಟವಾಗಿದ್ದರೆ ನಾನು ಈಗಲೇ ಇದೇ ಹೊತ್ತು ನಿಮ್ಮನ್ನು ಈ ಸಂಬಂಧದಿಂದ ಬಿಡುಗಡೆಗೊಳಿಸಿ ಸ್ವತಂತ್ರ ಮಾಡಬಲ್ಲೆ..."

ಚಿಕ್ಕಂದಿನಿಂದಲೂ ಈ ಸುಂದರ ರಾಜಕುಮಾರನ ಕನಸು ಹೆಣೆಯುತ್ತಾ ಬಂದಿದ್ದ ನಾನು ಈಗ ನನ್ನ ಕನಸಿಗೆ ಸಂಬಂಧವಿಲ್ಲದ ಈ ಪ್ರಶ್ನೆಯನ್ನು ಕೇಳಿ ಹೆಚ್ಚಾದ ನನ್ನ ಹೃದಯದ ಬಡಿತವನ್ನು ನಿಯಂತ್ರಿಸಲು ಪ್ರಯತ್ನಿಸಿದೆ. ಅವರು ಏರುಧ್ವನಿಯಲ್ಲಿ ಮತ್ತೊಮ್ಮೆ ಪುನರುಚ್ಚರಿಸಿದರು. ನಾನು ಕುತ್ತಿಗೆಯನ್ನು ಮಂಡಿಗಳೊಳಗೆ ಹುದುಗಿಸಿ ಕುಳಿತಿದ್ದೆ. ಮೂರನೇ ಸಾರಿ ಅವರು ಸಿಡಿಮಿಡಿಗೊಂಡು ಗದರುತ್ತಾ ಹೇಳಿದರು... "ನನ್ನೆಲ್ಲ ಪ್ರಶ್ನೆಗಳಿಗೆ ನಾನು ಒಂದೇ ಬಾರಿಗೆ ಕೇವಲ 'ಹೌದು' ಎನ್ನುವ ಉತ್ತರವನ್ನಷ್ಟನ್ನೇ ಬಯಸುತ್ತೇನೆ." ನಾನು ಗಾಬರಿಗೊಂಡು ಮುಖದ ಮುಸುಕು ತೆಗೆದು ಕೂಡಲೇ "ಇಲ್ಲ" ಎನ್ನುವಂತೆ ಕುತ್ತಿಗೆ ಅಲ್ಲಾಡಿಸಿದೆ. ಅವರು ಯಾವುದೇ ಶಿಷ್ಟಾಚಾರವಿಲ್ಲದ ನೋಟದಿಂದ ನನ್ನ ಕಡೆ ನೋಡಿ ಹಾಸಿಗೆಯ ಮೇಲೆ ಕುಳಿತು ಹೇಳಿದರು... "ನಾನು ಸಾಕಷ್ಟು ದಣಿದಿದ್ದೇನೆ. ನನಗೀಗ ಆರಾಮ ಬೇಕಾಗಿದೆ..." ಕೂಡಲೆ ಮಲಗಿ ನಿದ್ದೆ ಹೋದರು.

ನನ್ನ ಅಜ್ಜಿ ಹೇಳುತ್ತಿದ್ದ ಕತೆಯ ರಾಜಕುಮಾರನ ನೆನಪು ನನ್ನನ್ನು ಬಹುವಾಗಿ ಕಾಡಲಾರಂಭಿಸಿತು. ನಾನು 'ಆ ರಾಜಕುಮಾರನ ಕತೆಯನ್ನು ಹೇಳಿ' ಎಂದು ಅಜ್ಜಿಯನ್ನು